**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ರವರ ನಿಯಮ 72ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:**

**ಮಂಡ್ಯದಲ್ಲಿ ಕೆ.ಎಸ್.ಆರ್.ಟಿ.ಸಿ. ಚಾಲಕನ ಆತ್ಮಹತ್ಯೆ ಪ್ರಕರಣದಲ್ಲಿ ಜುಲೈ 6 ರಂದು ಮಧ್ಯ ರಾತ್ರಿ 1.00 ಗಂಟೆ ವೇಳೆಯಲ್ಲಿ ಸಂಶಯಾಸ್ಪದ ಸ್ಥಳೀಯ ಮುಖಂಡರುಗಳು ಮಾರ್ಗ ಮಧ್ಯದಲ್ಲಿ ಅಂಬ್ಯುಲೆನ್ಸ್‌ನ್ನು ತಡೆದು ನಡೆಸಿರುವ ವಿಚಾರಣೆಯ ಕುರಿತು.**

**ಉತ್ತರ:**

ಕೆ.ಎಸ್.ಆರ್.ಟಿ.ಸಿ ನೌಕರರಾದ ಶ್ರೀ ಜಗದೀಶ್ ಹೆಚ್.ಆರ್. ರವರು ಆತ್ಮಹತ್ಯೆಗೆ ಪ್ರಯತ್ನಿಸಿದ ಪ್ರಕರಣದ ವಿಚಾರಣೆಯನ್ನು ಪೊಲೀಸ್ ಮಹಾನಿರ್ದೇಶಕರು, ಸಿ.ಐ.ಡಿ. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ರವರ ಆದೇಶ ಸಂಖ್ಯೆ: 01/ಸಾಮಾನ್ಯ ಅಪರಾಧ/ಸಿಐಡಿ/2023 ದಿನಾಂಕ: 08.07.2023ರ ಆದೇಶದಂತೆ ಪ್ರಕರಣದ ವಿಚಾರಣೆಯನ್ನು ಸಿ.ಐ.ಡಿಗೆ ವಹಿಸಲಾಗಿರುತ್ತದೆ.

ಸದರಿ ಘಟನೆಯ ವಿಚಾರಣೆಯನ್ನು ನಡೆಸುವ ಸಲುವಾಗಿ ಪೊಲೀಸ್ ಮಹಾನಿರೀಕ್ಷಕರು, ಸಿ.ಐ.ಡಿ ರವರ ಮೇಲುಸ್ತುವಾರಿಯಲ್ಲಿ ಒಬ್ಬರು ಎಸ್.ಪಿ, ಡಿ.ಎಸ್.ಪಿ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳನ್ನು ಒಳಗೊಂಡ ತನಿಖಾ ತಂಡವನ್ನು ರಚಿಸಲಾಗಿರುತ್ತದೆ.

ಸದರಿ ತಂಡವು ಶ್ರೀ ಜಗದೀಶ್ ಹೆಚ್.ಆರ್ ರವರು ಆತ್ಮಹತ್ಯೆಗೆ ಪ್ರಯತ್ನಿಸಿದ ಬಗ್ಗೆ ಕೂಲಂಕುಶವಾಗಿ ವಿಚಾರಣೆ ಕೈಗೊಂಡಿದ್ದು, ಸದರಿ ಘಟನೆಯ ಬಗೆಗಿನ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಆದಷ್ಟು ಶೀಘ್ರದಲ್ಲಿ ವಿವರವಾದ ವರದಿಯನ್ನು ಸಲ್ಲಿಸಲಿದೆ.

---

HD 20 SDN 2023

ಪರಮೇಶ್ವರ

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು